Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

21—5—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸ್ಥಾಪಕರು— ಆರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ.

ಗೋಸಂರಕ್ಷಣೆ ಮಾಡಿ

ಭಾರತ – ಚೀನಾ ಆಯುಧ ಘರ್ಷಣೆ ಅನಿವಾರ್ಯ

ಲಂಡನ್ 20 — ಪೂರ್ವದ ಎರಡು ದೊಡ್ಡರಾಷ್ಟ್ರಗಳಾದ ಭಾರತ-ಚೀನಾ ಗಳಿಗೆ ಸಶಸ್ತ್ರ ಘರ್ಷಣೆ ಅನಿವಾರ್ಯವೆಂ ಬುದಾಗಿ ಅಧ್ಯಕ್ಷ ಕೆನೆಡಿಯವರ ಕೆಲ ಸಲಹೆಗಾರರಿಗೆ ವಾನದಟ್ಟಾಗಿದೆ ಅದು ಲಾವೊ ಬಿಕ್ಕಟ್ಟನ್ನು ಅಲ್ಪ ಮಾಡುವ ದೆಂದು ಅವರು ಅಭಿಪ್ರಾಯ

ಕನ್ನಡ ಅಭ್ಯಾಸ

ಮೈಸೂರು ಯುದ್ಧಗಳನ್ನು ಕುರಿತು ತಿಳಿಯುವದರೊಡನೆ ಲೆನಿನ್‌ಗ್ರಾಡಿನಲ್ಲಿ ಕಾಸಿಮೊ ಎಂಬವರು ಕನ್ನಡ ಅಭ್ಯಸಿಸು ತ್ತಿರುವರೆಂದು ಮೈಸೂರು ಮಹಾರಾಜ ರವರು ಅಲ್ಲಿಗೆ ಭೇಟಿ ಇತ್ತಿದ್ದಾಗ ಅವ ರಿಗೆ ತಿಳಿಸಲಾಯಿತು

ಆತ್ಮಹತ್ಯೆ ಯತ್ನ ವಿಫಲ

ಬೆಂಗಳೂರಿನ ಪಿಯೂಪದ ಕಡುಗೊಂ ಡನ ಹಳ್ಳಿಯಲ್ಲಿ ಆರೋಗ್ಯಸ್ವಾಮಿ ಎಂ ಬ ಪೋಲೀಸು ಕಾರ್ಯಸ್ಥೆಬಲ ಜೀವನ ದಲ್ಲಿ ಜಿಗುಪ್ಸೆಗೊಂಡು ಗುಂಡುಹೊಡೆ ದುಕೊಂಡನು ಅವನ ಪರಿಸ್ಥಿತಿ ಆ ತಂಕವುಂಟು ಮಾಡಿದೆ.

ಚಿನ್ನ ಪತ್ತೆ

ಕುವಾಯಿತ್‌ನಿಂದ ಕರುಣೆಯೋರ್ವ ಳು ವಿಮಾನದಲ್ಲಿ ಮದ್ರಾಸಿಗೆ ಬಂದಳು. ಅವಳ ಬ್ಯಾಗಿನಲ್ಲಿ 10 ತೊಲಾ ಚಿನ್ನ ಸಿಕ್ಕಿತು

ಮನವಿ

ಗಂಪು ಪ್ರದೇಶಗಳ ಶಾಸನದಿಂದ ಮನೆಗಳನ್ನು ಖಾವಿರಾರು ಭಾರತೀಯರು ನಿರ್ವಾಸಿತರಾಗುವದನ್ನು ತಪ್ಪಿಸಬೇಕೆಂದ ದಕ್ಷಿಣ ಆಫ್ರಿಕಾ ಪ್ರಧಾನಿ ವರ್ ವೋರ್ಡರಿಗೆ ನೇಟಾಲು ಭಾರತ ಕಾಂ ಗ್ರೆಸಿನ ಅಧ್ಯಕ್ಷ ಪಾತಿರ್ ಕೋರಿದ್ದಾರೆ

ಅನಾಯವಾದ ತೆರಿಗೆಗಳ ವಿರುದ್ಧ ಈ ತಿಂಗಳ 8 ರಂದು ಪ್ರತಿಭಟನಾ ದಿನ ಆಚರಿಸಬೇಕೆಂದು ಕರ್ನಾಟಕ ಕಮ್ಯೂ ನಿಸ್ಟ್ ಪಕ್ಷ ಕರೆ ಇತ್ತಿದೆ

ಪ್ರವಾಹ

ಷಿಲಾಂಗ್ 20 — ಪೂರ್ವ ಪಾ ಕಿಸ್ತಾನದ ಕರ್ನಫುಲಿ ನದಿಯು ಮೇಲೆ ನಿರ್ಮಿಸುವ ಆಣೆಕಟ್ಟಿನ ಪರಿಣಾಮವಾಗಿ ನೋಜೊ ಬೆಟ್ಟಗಳು ಮತ್ತು ಚಟ್ ಗಾಂಗು ಗಡಿ ಪ್ರದೇಶದ ಡೆವುಗಿರಿಯು ಳ್ಳಿಂದ ಕೆಲವು ಗ್ರಾಮಗಳು ಪ್ರವಾಹ ದಲ್ಲಿವೆ ಎಂದು ವರದಿ ಬಂದಿದೆ ಭಾರತ ಪಾಕಿಸ್ತಾನ ಗಡಿಯಲ್ಲಿರುವ ತೇಗ ನದಿ ಯಲ್ಲಿ ಪ್ರವಾಹ ಏರಿದೆ. ಇನ್ನೇನಾ ದರೂ ಪ್ರವಾಹ ಏರಿದರೆ ಸ್ವಲ್ಪ ಎತ್ತರ ದಲ್ಲಿ ನಿರ್ಮಾಣವಾಗಿರುವ ಪೋಲೀಸು ಔಟ್ ಪೋಸ್ಟು ಹಾನಿಗೀಡಾಗುವದು

ಕೋತಿಯಿಂದ ಮಗು ರಕ್ಷಣೆ

ನೆಲ್ಲೂರಿನ ಸರ್ಕಾರಿಂದ ಆಸ್ಪತ್ರೆಗೆ ಕಪಿ ಯೊಂದು ಶನಿವಾರ ಪ್ರವೇಶಿಸಿ 4 ತಿಂಗ ಳಿನ ಮಗು ವೊಂದನ್ನು ಎತ್ತಿಕೊಂಡಿತು. ಮಗುವಿನ ತಾಯಿ ಅಬ್ಬರಿಸಿದಳು ಆ ವೇಳೆಗೆ ನರ್ಸ್ ಒಂದು ಪುಗುಎಗೆ ಗಾ ಯವಾಗದಂತೆ ಬುದ್ಧಿವಂತಿಕೆಯಿಂದ ಕೈಗೆ ಪಡೆದಳು.

ನೆಹರು ಬಗ್ಗೆ ಪ್ರಶಂಸೆ

ನಮ್ಮ ಕಾಲದ ಘನ ವ್ಯಕ್ತಿಗಳಲ್ಲಿ ಪ್ರಧಾನಿ ನೆಹರುರವರು ಒಬ್ಬರು ಎಂದು ಸಿಂಗ್ಲಂಡಿನ ಪ್ರಧಾನಿ ಲಿ ಕುವರ್ ಯು ಸಿಂಗ್ಲಂಡಿನಲ್ಲಿ ತಿಳಿಸಿದರು.

—

ರಾವಲ್ಪಿಂಡಿ 20 — ಆಗಸ್ಟ್ 3 ನೆಯ ವಾರದ ವೇಳೆಗೆ ಯುದ್ಧ ವಿರಾಮ ಗೆರೆ ದಾಟಿ ಚಳುವಳಿ ಕೈಗೊಳ್ಳುವ ನಿರ್ಧಾರವನ್ನು ಚೌಧುರಿ ಗುಲಾಂ ಅಬ್ಬಾಸ ನೇತೃತ್ವದ ಜಮ್ಮು ಮತ್ತು ಕಾಶ್ಮೀರ ದ ಮುಸ್ಲಿಂ ಸಮ್ಮೇಳನ ಅಂಗೀಕರಿಸಿದೆ 10 ಸಹಸ್ರ ಮಂದಿ ಸಶಸ್ತ್ರ ಸ್ವಯಂ ಸೇವಕರನ್ನು ಸೇರಿಸುವ ನಿರ್ಧಾರವಾ ಗಿದೆ.

ಜಂಗ್ಲಿ ಚಿತ್ರದ ಶತದಿನೋತ್ಸವ

ಮೈಸೂರಿನ ಸುಪ್ರಸಿದ್ಧ ಉಡ್ ಲ್ಯಾಂಡ್ಸ್ ಪಿಕ್ಚರ್ ಹೌಸ್‌ನಲ್ಲಿ ನಿನ್ನೆ ದಿವಸ ಜಂಗ್ಲಿ ಚಿತ್ರದ ನೂರನೆಯ ದಿನೋತ್ಸವ ವೈಭವದಿಂದ ಸಂಭವಿಸಿತು.

ಉಪಾಹಾರಾನಂತರ ಶ್ರೀ ಎಂ ಗೋವಿಂದ ಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸುತ್ತಾ, ಮನಪ್ಪರಿಗೆ 60 ವರ್ಷಗಳು ಆದಮೇಲೆ ಶಾಂತಿ ಬಯಸುವಂತೆ ಈ ಚಿತ್ರಕ್ಕೆ ನೂರನೆಯ ದಿನದ ಶಾಂತಿ ದೊರೆತಿದ್ದೇವೆ ಎಂದರು. ಈ ವರೆಗೆ ಈ ಚಿತ್ರವನ್ನು 1 ವರೆ ಲಕ್ಷಕ್ಕೆ ಹೆಚ್ಚು ಜನರು ನೋಡಿದವರು. ಮತ್ತೆ ಮತ್ತೆ ಒಂದು ನೋಡುತ್ತಿರುವರು ಎಂದು ಅವರು ಹೇಳಿದರು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಡಿವಿಜನಲ್ ಕಮಿಷನರ್ ಶ್ರೀ ಬಿ ಬೋಪ್ಪನವರು ಭಾಷಣಮಾಡುತ್ತಾ, ಭಾರತೀಯ ಚಿತ್ರ ಗಳೀಗ ವಿದೇಶಗಳಿಗೆ ಹೋಗಿ ವಿದೇಶಿ ವಿನಿಮಯ ಗಳಿಸುತ್ತಿವೆ ಕಾದೊಂದು ಕಲೆ. ಇದಕ್ಕೆ ಪ್ರೋತ್ಸಾಹ ಕೊಡ ಬೇಕು — ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಪಿಕ್ಚರ್ ಹೌಸ್ ಪರವಾಗಿ ಶ್ರೀ ಗೋವಿಂದ ಸ್ವಾಮಿಯವರು, ಶ್ರೀ ಚಾಮುಂಡೇಶ್ವರಿ ವರ್ಕ್ಸ್ ಉಡ್‌ಲ್ಯಾಂಡ್ಸ್ ಇವರ ಫೀಲ್ಡನ್ನು ಅಧ್ಯಕ್ಷರು ಮೂಲಕ ಚಿತ್ರದ ಹಂಚಿಕೆದಾರರಿಗೆ ಅರ್ಪಿಸಿದರು ಹೀಗೆ ಫಲಂಗ್ ಪರವಾಗಿ ಶ್ರೀ ಚುಸಿಲಶಲ್ ರವರು ಕಾಶ್ಮೀರ ಕಣಿವೆಯನ್ನುಳ್ಳ ಫೀಲ್ಡನ್ನು ಅಧ್ಯಕ್ಷರು ಮೂಲಕ ಶ್ರೀ ಗೋವಿಂದಸ್ವಾಮಿಯವರು ಸ್ವೀಕರಿಸಿದರು

ಶ್ರೀಗಳಾದ ಗೋವಿಂದ ಸ್ವಾಮಿಯವರು, ರಾಮಮೂರ್ತಿಯವರು, ಲಕ್ಷ್ಮಣ ಮೂರ್ತಿಯವರು ಸುಸ್ವಾಗತಿಸಿದರು. ಜಂಗ್ಲಿ ಪ್ರದರ್ಶನ ಇತ್ತು

ಪಾಕ್‌ಗೆ ಫೀಜೋ

ಭಾರತದಿಂದ ಪಾಕಿಸ್ತಾನಕ್ಕೆ ಹೋ ಗಿರುವ ತಮ್ಮ ಸಹೋದ್ಯೋಗಿಗಳ ನಿ ಯೋಗವನ್ನು ಭೇಟಿ ಮಾಡಲು ತಾವು ಪಾಕಿಸ್ತಾನಕ್ಕೆ ಹೋಗುವುದಾಗಿ ನಾಗ ದಂಗೆಕೋರ ನಾಯಕ ಫೀಜೋ ನಿನ್ನೆ ಲಂಡನ್ನಲ್ಲಿ ತಿಳಿಸಿದರು.

ವಿವಾಹ

ಲಂಡನ್ 20 — ಲಂಡನ್ ಚರ್ಚ್ ದಲ್ಲಿ 68 ವರ್ಷದ ಸ್ಪಿನ್ಸರ್ ವಿಧವೆ ಜೇಂಟ್ ಸ್ಕಾಟ್ 73 ವರ್ಷದ ಕಣ್ಣು ಕಾಣದ ಹಾಸ್ಯ ಕವಿ ಕೇಳಿದ ಜೋಸೆಫ್‌ಫ್ಲು ಎಂಟೆಯವರನ್ನು ವಿವಾಹವಾದರು ವಧು ವಿಗೂ ಕಣ್ಣು ಕಿವಿ ಇಲ್ಲ

ಮಹಾರಾಜರ ಹಿಂಸನುಡಿ

ಮಾನವ ಸಂತೋಷಕ್ಕೆ ವಿಜ್ಞಾನ ಅಥವಾ ಸಂಸ್ಕೃತಿ ಯಾವುದೇ ಕ್ಷೇತ್ರ ದಲ್ಲಿನ ಪ್ರಗತಿ ಕೊನೆಯಾಗಬಾರದು, ಅದಕ್ಕೆ ದಾರಿ ಆಗಬೇಕು ಎಂದು ಲೆನಿನ್‌ಗ್ರಾಡ್‌ನಲ್ಲಿ ಮೈಸೂರು ಮಹಾರಾಜರು ತಿಳಿಸಿದರು

ಮಿಡತೆ ಪ್ರವೇಶ

ಪಾಕಿಸ್ತಾನದಿಂದ ಮಿಡತೆಯ ತಂಡವೊಂದು ಭಾರತ ಪ್ರದೇಶಕ್ಕೆ ದಾಟಿದೆ ಎಂದು ಧಾಬ್ ಕುಶಾಲ ಮತ್ತು ಅದರ ಪಕ್ಕದ ಗ್ರಾಮಗಳ ಹತ್ತಿಯ ಬೆಳೆಯ ಮೇಲೆ ಕುಳಿತಿದೆ ಎಂದು ವರದಿ ಆಗಿದೆ.

ಶಾಲೆಯ ಹಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

22 ಮೂಲ ಶತೀಯ

× ಭಾರತದಲ್ಲಿ ಕಾರ್ಖಿಕ್ ಮೇಲೆ ಮ್ಯಾನಿಸ್ಟರ್ ಪ್ರಭಾವ ಇಳಿಯುತ್ತಿದೆ.

ಶಬ್ದ ಮಾಡುವವರ ಮೇಲೆ ತೆರಿಗೆ

ಷಾಲಸಬರ್ಗ್ 19— ಶಬ್ದಮಾಡುವವರ ಮೇಲೆ ತೆರಿಗೆ ವಿಧಿಸಬೇಕೆಂದು 2 ನೆ ಅಂತರರಾಷ್ಟ್ರೀಯ ಶಬ್ದ ನಿರೋಧ ಕಾಂಗ್ರೆಸ್ಸಿನಲ್ಲಿ ಒರ್ವ ಬ್ರಿಟಿಷ್ ಪ್ರತಿನಿಧಿ ಸೂಚಿಸಿದರು — ಈ ಕಾಂಗ್ರೆಸ್ಸಿಗೆ 500 ಮಂದಿ ನಿಪುಣರು 16 ವಿರೋಸ್ಯ ದೇಶಗಳಿಂದ ಪ್ರತಿನಿಧಿಗಳಾಗಿ ಬಂದಿರುವರು

3 ಜನರ ಸಾವು

ಜಮ್ಮು 19— ಪೊಂಜ ಜಿಲ್ಲೆಯ ಯುದ್ಧಸ್ಥಂಭರೇಖೆಯಲ್ಲಿನ ಭಿಂಬೇರ ಗಾಲಿಯಲ್ಲಿ ವಾರಾಂತ್ಯದಲ್ಲಿ ಬಾಂಬುಸ್ಫೋಟದಿಂದ 3 ಮಂದಿ ಮಡಿದರು — ಈ ಕಾರ್ಯವು ಪಾಕಿಸ್ತಾನದ ಬಾಡಮೇಲು ಚಳುವಳಿಗಾರರಿಂದಾದುದೆಂದು ಊಹಿಸಲಾಗಿದೆ.

ಅಪಹರಿಸಲ್ಪಟ್ಟ ಹುಡುಗಿಯಿಂದ ನೆಹರುರಿಗೆ ಪತ್ರ

ಸಂಗ್ರೂರ್ 19— 1958 ರಲ್ಲಿ ಕಾಸ್ಪುರದಲ್ಲಿ ಸ್ಕೂಲಿಗೆ ಹೋಗುತ್ತಿದ್ದ ಒರ್ವ 20 ವರ್ಷದ ಹುಡುಗಿಯನ್ನು ದರೋಡೆಗಾರರು ಗುಂಪಿನವರು ಎತ್ತಿಕೊಂಡು ಹೋಗಿ ಎರಡು ಸಾರಿ ಮಾರಿದರು .... ಕಡೆಗೆ ಪಂಜಾಬಿನ ಸಂಗ್ರೂರು ಜಿಲ್ಲೆಯ ಒಂದು ಗ್ರಾಮದಲ್ಲಿ ಇಡಲ್ಪಟ್ಟಿದ್ದ ಸ್ಥಳದಿಂದ ಹುಡುಗಿಯು ಪಂ|| ನೆಹರೂರಿಗೆ ಒಂದು ಕಾಗದ ಬರೆದು ಅದು ಹೇಗೋ ಅವರಿಗೆ ತಲಪುವಂತೆ ಮಾಡಿದಳು .... ನೆಹರೂವರು ವಿಷಯವನ್ನು ಪಂಜಾಬು ಮುಖ್ಯ ಮಂತ್ರಿಗಳಿಗೆ ತಿಳಿಸಲು, ಪೋಲೀಸರು ಸೂಕ್ಷ್ಮ ಧಾಳಿ ನಡೆಸಿ ಹುಡುಗಿಯನ್ನು ಬಿಡುಗಡೆ ಮಾಡಿದರು.

ಹೆಣ್ಣು ಸಿಕ್ಕಲಿಲ್ಲ

ಧೋಲಪುರ 19— ಖಾನಪುರದಲ್ಲಿಯ ಒಂದು ಹುಡುಗಿಯನ್ನು ವರುವೆ ಯಾಗಲು ವರನೂ ಅವನ ಪಾರ್ಟಿಯವರೂ ಅಲ್ಲಿಗೆ ತೆರಳಿದರು ; ಅಷ್ಟರಲ್ಲಿ ಹುಡುಗಿ ವಶ್ಯ ಅವಳ ತಂದೆ ಅಲ್ಲಿಂದ 18 ಮೈಲಿ ದೂರದ ಗ್ರಾಮಕ್ಕೆ ಹೊಂಟುಹೋದರು; ಅವರನ್ನು ಕರೆತರಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಯಿತು ; ಮದವೆ ಪಾರ್ಟಿ 5 ದಿನಗಳ ನಂತರ ವಾಪಸಾಯಿತು ; ಗಂಡಿಗೆ ಹೆಣ್ಣು ಸಿಕ್ಕಲಿಲ್ಲ !

ಬೊಂಬಾಯಿನಲ್ಲಿ ವೇಶ್ಯೆ ಸಂಖ್ಯೆ

ಬೊಂಬಾಯಿನ ಒಂದೊಂದು 'ರೆಡ್ ಲೈಟ್' ರಸ್ತೆಯು 250 'ಸ್ಕಾರ್ಲೆಟ್ ವಿಮೆನ್' ಹೊಂದಿರುವುದೆಂದೂ, ಇಂತಹ ಭಾಗಗಳು ಡಜನ್ನಿಗಿಂತ ಹೆಚ್ಚಾಗಿರುವವೆಂದೂ, ಅಂದರೆ ಬೊಂಬಾಯಿನಲ್ಲಿ 1 000 ವೇಶ್ಯೆಯರಿರುವರೆಂದೂ, ಬೊಂಬಾಯಿನಲ್ಲಿ ವೇಶ್ಯೆಯರ ವಿಚಾರ ಎಂಬ ಪುಸ್ತಕ ತಿಳಿಸುತ್ತದೆ.

oooo

ಬೊಂಬಾಯಿ 19— ರೂ 3 ಲಕ್ಷ ಬೆಲೆಯ ಚಿನ್ನವನ್ನು ಅಕ್ರಮವಾಗಿ ಸಾಗಿಸಿ ತಂದ ಅಪಾದನೆಗೆ ಗುರಿಯಾಗಿರುವ ಬ್ರಿಟಿಷ್ ರಾಷ್ಟ್ರೀಯ ರೋನಾಲ್ಡ್ ಸ್ಯಾಮ್ಸನ್ 1 ಲಕ್ಷ ಊಗಳ ಜಾಮೀನಿನ ಮೇಲೆ ಬಿಡಲ್ಪಟ್ಟನು.

oooo

ಪಾಕಿಸ್ತಾನದ ಹೊಸರಾಜ್ಯಾಂಗ ಪತ್ರಿಕಾ ಸ್ವಾತಂತ್ರ್ಯ ಈಡೇರಿಸುವದಾಗಿ ಘೋಷಿಸಿದ ಅಂತರಾಷ್ಟ್ರ, ಪತ್ರಿಕಾಸಂಸ್ಥೆ ತಿಳಿಸಿ ನಿರ್ಣಯಿಸಿದೆ.

ಪೌರಸಭೆ ಚುನಾವಣೆಗೆ ಸ್ವತಂತ್ರ ಪಕ್ಷದ ಪರವಾಗಿ ಸ್ಪರ್ಧಿಸಲು

ಚುನಾವಣೆಯಲ್ಲಿ ಪಕ್ಷದ ಪರವಾಗಿ ಸ್ಪರ್ಧಿಸುವ ಸದಸ್ಯರು ಮತ್ತು ಪಕ್ಷದ ಶಕ್ತಗಳಲ್ಲಿ ವಿಶ್ವಾಸವುಳ್ಳ ಇತರರು ರೂ 25 ಪ್ರವೇಶಧನದೊಡನೆ ಚಾಮರಾಜ ಮೊಹಲ್ಲಾ ಶೇಷಾದ್ರಿ ಅಯ್ಯರ್ ರಸ್ತೆ, ನಂ 46 ರ ರಲ್ಲಿರುವ ಪಕ್ಷದ ಕಛೇರಿಗೆ ಅರ್ಜಿಯನ್ನು ಈ ಮಾಹೆ ತಾ|| 24 ರ ವರಿಗೆ ಸಲ್ಲಿಸಬಹುದು ಅರ್ಜಿ ಸಲ್ಲಿಸುವ ಕಾಲ ಹೆಳಗ್ಗೆ 8—30 ರಿಂದ 11 ಗಂಟೆ ವರಿಗೆ ಮಧ್ಯಾಹ್ನ 5 ರಿಂದ ಸಂಜೆ 7 ಗಂಟೆ ವರಿಗೆ

ವುಡ್‌ಲಾಂಡ್ ಸ್ಮಾರ್ಹ 15 ನೆ ವಾರ

ಶಿ ಷ್ಟ.

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ವೈಭವ 5 ನೇ ವಾರ

ಸಂಪೂರ್ಣ ರಾಮಾಯಣ

- ಕ ನ್ನ ಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



ಅವೇರಿಕ— ವಿಭ್ರಹಂ ಲಿಂಕನ್ನರ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.